# ಕಲಿಕಾಫಲ - 4

## ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥಮಾಡಿಕೊಂಡು, ಓದುವರು

### ಚಟುವಟಿಕೆ 1: ನನ್ನ ಪದಪುಂಜ

ಅ. ನೀಡಲಾದ ಅಕ್ಷರಗಳಿಗೆ ಪದಗಳನ್ನು ರಚಿಸಿ, ಸಹಪಾಠಿಯೊಂದಿಗೆ ಸ್ಪಷ್ಟವಾಗಿ ಉಚ್ಚಾರ ಮಾಡುತ್ತಾ ಓದೋಣ.

(ಸೂಚನೆ: ಹೇಳುವ ಸಂದರ್ಭದಲ್ಲಿ ಬಾಯಿಯ ಹತ್ತಿರ ಒಂದು ಚೌಕಾಕಾರದ 3 × 3 ಸೆಂ.ಮೀ ಅಳತೆಯ ಹಾಳೆಯನ್ನು ಹಿಡಿದು ಕೊಂಡು ಉಚ್ಚರಿಸಿ. ಪದಗಳನ್ನು ಉಚ್ಚರಿಸುವಾಗ ಆಗುವ ವ್ಯತ್ಯಾಸ ಗಮನಿಸಿ)

**ಮಾದರಿ:** ಛ-ಛತ್ರಿ, ಛಾಯ, ಛಂದಸ್ಸು

ಸ: ಸಂಕ್ರಾಂತಿ ಸೋರಿಕೆ ಸಿಂಹಾಸನ ಸಿಂಹ ಸೆಕೆ ಸೋಜುಗ
ಸ್ಥಳ ಸ್ಕಂದ ಸೀಳಿಕೆ ಸಂಪತ್ತು ಸಂಪನ್ನ ಸಮ ಸಮಾನ ಸ್ಥಾನಮಾನ ಸಾಹಿತ್ಯ ಸಮ್ಮೇಳನ

ಶ: ಶಂಖ ಶಂಭೂ ಶೀರ್ಷಿಕೆ ಶೆಟ್ಟಿಹಳ್ಳಿ ಶೀಲಾ ಶೋಭಾ ಶ್ರೀಶೈಲ ಶುಂಠಿ ಶಾರದಾ ಶಿಕಾರಿ ಶೃಂಗ ಶಾಲೆ ಶೃಂಗಾರ ಶೃಂಗೇರಿ

ಹಾಸನ ಹಂಸ ಹಿಡಿ ಹೊಡೆ ಹಸನ್ಮುಖಿ ಹೋರಿ ಹೇಳಿ ಹಾಡು ಹಕ್ಕಿ ಹಾಡು ಹಾರಂಗಿ ಹೇಮಾವತಿ ಹಿನ್ನೀರು ಹಾಗೂ ಹೇಗೆ ಹಿಂದೆ ಹೆಚ್ಚು ಹಣ

ಕನ್ನಡ ಕಲಿಕಾ ಕೌಶಲ್ಯ ಕಮ್ಮಟ ಕಾರ್ಯಕ್ರಮ ಕಿರೀಟ ಕುದುರೆ ಕೂಡ ಕೃಷಿ ಕೃಷ್ಣ ಕೆಲವು ಕೇವಲ ಕೈಯಲ್ಲಿ ಕೊಳಲು ಕೋಟಿ ಕೌಟುಂಬಿಕ ಕಾಂಗ್ರೆಸ್

ಜ: ಜೋಗಿ ಜಾನಪದ ಜೂಜು ಜಿಲ್ಲೆ ಜೀವನ ಜುಲೈ ಜೂನ್ ಜಯಭೇರಿ ಜೆಡಿಎಸ್ ಜೇಮ್ಸ್ ಜೈವಿಕ ಜೊತೆ ಜೋಗಿ ಜೌಗು ಜಂಟಿ

ದ: ದೊಡ್ಡ ದಾವಣಗೆರೆ ದಿನ ದೀಪಾವಳಿ ದುಡ್ಡು ದೂರ ದೃಷ್ಟಿ ದೆಹಲಿ ದೇಶದ ದಕ್ಷಿಣ ದೈಹಿಕ ದೃಢತೆ ದೊಡ್ಡ ದೋಸೆ ದೌರ್ಬಲ್ಯ ದಂಪತಿ

ಮ: ಮಂಗಳ, ಮಾರಮ್ಮನ ಜಾತ್ರೆ, ಮೇಲುಕೋಟೆ, ಮತ್ತು, ಮನೆ, ಮೇಕೆ ಮರಿ ಮಾಡುವ ಮೂಲಕ ಮೀನು ಮೂರು ಮೃದು ಮಧುರ ಮೋದಿ ಮೌನ ಮುಂದೆ ಮೊಬೈಲ್

ಟ: ಟೆಂಗಾ ಟೀವಿ ಟಾಪ್ ಟಿಡಿಎಸ್ ಟೂರ್ ಟೆಸ್ಟ್ ಟ್ಯೂಬ್ ಟೇಬಲ್ ಟೆನಿಸ್ ಟೈರ್ ಟೊಮೆಟೊ ಟೋಲ್ ಟೌನ್ ಟೊಂಕ ಟಂಕ ಸಾಲೆ

## ಚಟುವಟಿಕೆ 2: ಅರ್ಥ ಹುಡುಕುತ್ತಾ ಓದೋಣ

ಅ. ನೀಡಲಾದ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥವನ್ನು ಹುಡುಕಿ. ನಂತರ ನಿಮ್ಮ ಗೆಳೆಯರಿಗೆ ಓದಿ ಹೇಳಿ.

**ಮಾದರಿ:** ಮನ–ಮನಸ್ಸು ; ಮಣ–ಅಳತೆ

- ಪ್ರಧಾನ: ಮುಖ್ಯ
- ಪ್ರದಾನ: ನೀಡುವುದು.
- ಜರಿ: ಬೈಯುವುದು,
- ಝರಿ: ತೊರೆ, ಹಳ್ಳ
- ಮಧ್ಯ: ನಡುವೆ
- ಮದ್ಯ: ಮತ್ತೇರಿಸುವ ಪಾನೀಯ
- ನಾಥ: ಗಂಡ, ಸಂಗಾತಿ
- ನಾತ: ವಾಸನೆ.
- ಬಾನು: ಆಕಾಶ.
- ಭಾನು: ಸೂರ್ಯ, ರವಿ
- ಹೆಸರು: ನಾಮ
- ಎಸರು: ತಿಳಿಸಾರು.
- ಬಾರಿ: ಸರದಿ
- ಭಾರಿ: ಅಧಿಕವಾದ
- ಕೈಕೊಡು: ಮೋಸ ಮಾಡು.
- ಕೈಗೂಡು: ದೊರಕು.
- ಬಾಲೆ: ಹುಡುಗಿ
- ಬಾಳೆ: ಒಂದು ಬಗೆಯ ಹಣ್ಣು
- ಕರೆ: ಆಮಂತ್ರಣ
- ಖರೆ: ನಿಜ, ಸತ್ಯ
- ಧನ: ಹಣ
- ದನ: ಎತ್ತು, ಹಸು
- ಬಾವಿ: ಭೂಮಿಯ ನೀರಿನ ಗುಂಡಿ
- ಭಾವಿ: ಮುಂದಿನ, ಮುಂಬರುವ

## ಚಟುವಟಿಕೆ 3: ಹುಡುಕುತ್ತಾ ಅರಿಯೋಣ

ನೀಡಲಾದ ಪದಗಳಿಗೆ ಸ್ವತಃ ನೀವೇ ಶಬ್ದಕೋಶವನ್ನು ಬಳಸಿ ಅರ್ಥ ಹುಡುಕಿ ಬರೆದು, ಆ ಪದಗಳಿಗೆ ನಿಮ್ಮದೇ ಸ್ವಂತ ವಾಕ್ಯ ರಚಿಸಿ ಓದಿ ಹೇಳಿ.

ಮಂಡಿ–ಮಂದಿ: ಮಂಡಿ - ಕಾಲು ಮಡಚುವ ಜಾಗ. ನನ್ನ ತಾಯಿಗೆ ೩ ತಿಂಗಳಿನಿಂದ ಮಂಡಿನೋವು ಆರಂಭವಾಗಿದೆ. ಮಂದಿ - ಜನರ ಗುಂಪು. ಈ ವಿಚಾರ ತಿಳಿದು ಮನೆ ಮಂದಿಯೆಲ್ಲಾ ಚಿಂತೆ ಮಾಡಿದರು.

ಕಪ್ಪ–ಕಬ್ಬ: ಕಪ್ಪ - ಸಾಮಂತ ರಾಜರು ಚಕ್ರವರ್ತಿ ರಾಜನಿಗೆ ಕೊಡುತ್ತಿದ್ದ ಹಣ. ಹಿಂದೆ ಬ್ರಿಟಿಷರು ಭಾರತದ ರಾಜರಿಂದ ಕಪ್ಪ ಕಾಣಿಕೆ ಪಡೆಯುತ್ತಿದ್ದರು. ಕಬ್ಬ - ಕಾವ್ಯ. ವಿಕ್ರಮಾರ್ಜುನ ವಿಜಯ ಒಂದು ದೊಡ್ಡ ಕಬ್ಬ

ಹೇರು-ಏರು: ಹೇರು:- ಹೊಂದಿಸು. ಮೊದಲು ಕತ್ತೆಗಳ ಮೇಲೆ ಸಾಮಾನಿನ ಮೂಟೆ ಹೇರುತ್ತಿದ್ದರು. ಏರು - ಹತ್ತು, ಮೇಲೆ ಹೋಗು.

ಅವನು ಬೆಟ್ಟ ಹತ್ತುತ್ತಾ ಮೇಲೆ ಏರುತ್ತಾ ಹೋದನು

ಅಬ್ಬ-ಹಬ್ಬ:

ಹಬ್ಬ - ಸಮಾರಂಭ ಉತ್ಸವ.

ದೀಪಾವಳಿ ಬೆಳಕಿನ ಹಬ್ಬವಾಗಿದೆ.

ಹಾಡು-ಆಡು: ಹಾಡು:- ಸಂಗೀತದ ಮೂಲಕ ನುಡಿಯುವ ಸಾಲು

ಲತಾ ಮಂಗೇಶ್ಕರ್ ಪ್ರಸಿದ್ಧ ಹಾಡುಗಾತಿ.

ಆಡು:- ಆಟ ಆಡುವುದು. ಮಕ್ಕಳು ಆಡುತ್ತಾ ಬೆಳೆದರು.

ಹೆಡೆ-ಎಡೆ: ಹೆಡೆ - ಹಾವು ತಲೆ ಎತ್ತಿದಾಗ ಅದರ ತಲೆ.

ನಾಗರಹಾವಿನ ಹೆಡೆಯು ಅಂದ ಮುಚ್ಚಿ ಕಾಣುತ್ತದೆ.

ಎಡೆ = ಧಾರ್ಮಿಕ ಮನುಷ್ಯರಿಗೆ ಊಟ ನೀಡುವುದು. ಪ್ರತಿ ಹುಣ್ಣಿಮೆಗೆ ಗುಡ್ಡದಲ್ಲಿ ಎಡೆ ನೀಡುತ್ತಾರೆ.

ಧನಿ-ದನಿ: ಧನಿ -

ದನಿ = ಕಂಠ

ಅವಳ ದನಿ ಇಂಪಾಗಿತ್ತು.

ಬಿಡಿ-ಬೀಡಿ: ಬಿಡಿ - ಬೇರೆ-ಬೇರೆ. ಶಿಕ್ಷಕರು ಕಥೆಯನ್ನು ಬಿಡಿಬಿಡಿಯಾಗಿ ಹೇಳಿದರು

ಬೀಡಿ:- ತಂಬಾಕು ~~ಎಲೆ~~ ಎಲೆಯಿಂದ ಮಾಡುವ ಧೂಮಪಾನ

ಹಿಂದಿನ ಕಾಲದ ಜನ ಬೀಡಿ ಚಟಕ್ಕೆ ದಾಸರಾಗಿದ್ದರು.

ಕರು-ಕಾರು: ಕರು - ಹಸುವಿನ ಮಗು.

ಒಂದು ಹಸು ಒಂದೇ ಕರುವಿಗೆ ಜನ್ಮ ನೀಡುತ್ತದೆ.

ಕಾರು:- ಕಾರಿನಲ್ಲಿ ಸುಖಕರ ಪ್ರಯಾಣ ಮಾಡಬಹುದು.

ಬೆಳೆ-ಬೇಳೆ: ಬೆಳೆ - ಫಸಲು. ಈ ಬಾರಿ ಮಳೆ ಕಡಿಮೆಯಾದ್ದರಿಂದ ಬೆಳೆ ಕಡಿಮೆಯಾಯಿತು

ಬೇಳೆ. - ಸಂಸ್ಕರಿಸಿದ ಧಾನ್ಯಗಳ ಹೋಳುಗಳು.

ತೊಗರಿಬೇಳೆ ಸಾರು ಸರ್ವೇಸಾಮಾನ್ಯವಾಗಿ ಜನ ಸೇವಿಸುತ್ತಿದ್ದಾರೆ.

ಗುಳಿ-ಗೂಳಿ: ಗುಳಿ - ಕೆನ್ನೆಯ ಮೇಲೆ ನಕ್ಕಾಗ ಬೀಳುವ ತಗ್ಗು.

ಹುಡುಗ ನಕ್ಕಾಗ ಸುಂದರವಾದ ಗುಳಿ ಕಂಡಿತು.

ಗೂಳಿ - ಬೀದಿ ದನ. ಹಾವೇರಿಯಲ್ಲಿ ಗೂಳಿಗಳಿಗೆ ಎದುರಿಸಿದ್ದರು

ಫಲ... ಫಲಿತಾಂಶ, ಲಾಭದಾಯಕವಾಗುವ ಪ್ರಕ್ರಿಯೆ

ನಾವು ಮಾಡಿದ ಪುಣ್ಯದ ಫಲ, ಸತ್ತ ಮೇಲೆ ದೇವರ ಬಳಿ ಸಿಗುತ್ತದೆ.

ಪಲ....ಸೈನಿಕರು ಕತ್ತರಿಸಲು, ನೂಕಲು, ಇತ್ಯಾದಿಗಳಿಗೆ ಬಳಸಲಾಗುವ ಉದ್ದವಾದ, ಕೈಯಲ್ಲಿ ಹಿಡಿಯುವ, ಹರಿತವಾದ, ಮೊನಚಾದ ಆಯುಧ; ಒಂದು ಕತ್ತಿ.

ಯುದ್ಧ ಪಲಗಳಿಂದ ನಡೆಯಿತು.

## ಚಟುವಟಿಕೆ 4: ಯಾವುದು ಸೂಕ್ತ?

ಅ. ನೀಡಲಾದ ವಾಕ್ಯಗಳಿಗೆ ಸೂಕ್ತವಾದ ಪದಗಳನ್ನು ಆರಿಸಿ ಬರೆದು ವಾಕ್ಯಕ್ಕೆ ಅನುಗುಣವಾಗಿ ಮಾರ್ಪಡಿಸಿ ಪೂರ್ಣಗೊಳಿಸಿರಿ.

(ಭಾರಿ–ಬಾರಿ, ಬಾನು–ಭಾನು, ಪ್ರಧಾನ–ಪ್ರದಾನ, ಫಲ–ಪಲ)

1. ಪ್ರತಿದಿನ ಬಾನಿ ನಲ್ಲಿ ಭಾನು ಕಾಣಿಸಿಕೊಳ್ಳುತ್ತಾನೆ.
2. ಅವನು ಎರಡನೆಯ ಬಾರಿ, ಭಾರಿ ಮತಗಳಿಂದ ಜಯಗಳಿಸಿದನು.
3. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನನ್ನ ಶಾಲೆಯ ಮಕ್ಕಳು ಪ್ರಧಾನ ವಾಗಿ ಗಮನ ಸೆಳೆದರು.
4. ಕೆಲವರು ಹಬ್ಬ ಹರಿದಿನಗಳಲ್ಲಿ ಫಲ ಆಹಾರವನ್ನು ಸೇವಿಸದೇ ಫಲ ಆಹಾರವನ್ನು ಸೇವಿಸುತ್ತಾರೆ.

ಆ. ಬಿಟ್ಟಿರುವ ಸ್ಥಳಗಳಲ್ಲಿ ಸೂಕ್ತಪದಗಳನ್ನು ಆಯ್ಕೆ ಮಾಡಿ ಬರೆಯಿರಿ.

ರಂಗಪ್ಪ ಭಾನು (ಭಾನು/ಬಾನು) ವಾರದಂದು ಹಾಲು (ಹಾಲು/ಆಲು) ಮಾರಲು ಮಂಡ್ಯಕ್ಕೆ ಪ್ರತಿದಿನ ಹೋಗುತ್ತಿದ್ದನು. ಅಲ್ಲಿ ಹಾಲು ಮಾರಿ ಧನ (ದನ/ಧನ) ಸಂಪಾದಿಸಿದನು. ಆ ಧನವನ್ನು ಹಿಡಿದು ತನ್ನ ಪುಟ್ಟ ಮಗಳಿಗಾಗಿ ಅಂಗಡಿಗೆ ತೆರಳಿ ಸರ (ಶರ/ಸರ) ಖರೀದಿಸಿದನು.

ಮರಳಿ ಬರುವ ದಾರಿಯಲ್ಲಿ ಹರಿಯುವ ಝರಿ (ಜರಿ/ಝರಿ) ಕಂಡು ಅಲ್ಲಿಯೇ ಕುಳಿತು ಸಂತೋಷಪಟ್ಟನು. ಆ ಪ್ರಕೃತಿ ಸೌಂದರ್ಯ ಕಂಡು ಹಾಡು (ಹಾಡು/ಆಡು) ಹಾಡುತ್ತಾ, ಅಬ್ಬ (ಹಬ್ಬ/ಅಬ್ಬ) ಎಷ್ಟು ಸೊಗಸಾಗಿದೆ ಎಂದು ಉದ್ಗರಿಸಿದನು. ಪ್ರಯಾಣ ಸಮಯದಲ್ಲಿ ತಿನ್ನಲು ತಂದ ಊಟ (ಊಟ/ಊತ) ತಿಂದು ಫಲ (ಫಲ/ಪಲ)ವನ್ನು ಸಹ ತಿಂದು ಖುಷಿಯಿಂದ ಮನೆಗೆ ತೆರಳಿದನು.

## ಚಟುವಟಿಕೆ 5: ಅರಿತು ಹುಡುಕು

ನೀಡಲಾದ ವಾಕ್ಯಗಳಲ್ಲಿ ತಪ್ಪಾಗಿರುವ ಪದಗಳನ್ನು ಗುರುತಿಸಿ ಸರಿಪಡಿಸಿ ಓದಿ, ಬರೆಯಿರಿ.

1. ನನ್ನ ಸ್ನೇಹಿತ ನನ್ನನ್ನು ಜರಿಯ ಹತ್ತಿರ ಕರೆದುಕೊಂಡು ಹೋಗಿ ಇತರರ ಮುಂದೆ ನನ್ನನ್ನು ಝರಿದ.
   ನನ್ನ ಸ್ನೇಹಿತ ನನ್ನನ್ನು ಝರಿಯ ಹತ್ತಿರ ಕರೆದುಕೊಂಡು ಹೋಗಿ ಇತರರ ಮುಂದೆ ನನ್ನನ್ನು ಜರಿದ.
2. ಕೆಲವರು ಮಧ್ಯಪಾನ ಮಾಡಿ ರಸ್ತೆಯ ಮದ್ಯದಲ್ಲಿ ಅಡ್ಡಾ ದಿಡ್ಡಿಯಾಗಿ ಓಡಾಡುತ್ತಾರೆ.
   ಕೆಲವರು ಮದ್ಯಪಾನ ಮಾಡಿ ರಸ್ತೆಯ ಮಧ್ಯದಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡುತ್ತಾರೆ.
3. ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಮಕ್ಕಳು ಪ್ರದಾನವಾಗಿ ಗಮನ ಸೆಳೆದರು.
   ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಕ್ಕಳು ಪ್ರಧಾನವಾಗಿ ಗಮನ ಸೆಳೆದರು.

4. ಇತ್ತೀಚೆಗೆ ಭಾವಿ ಕಾಣದಾಗಿದೆ. ಇದರಿಂದ ಇಂದಿನ ಬಾವಿ ಪ್ರಜೆಗಳಿಗೆ ನೀರಿನ ಕೊರತೆ ಕಂಡುಬರುತ್ತಿದೆ.

ಇತ್ತೀಚೆಗೆ ಬಾವಿ ಕಾಣದಾಗಿದೆ. ಇದರಿಂದ ಇಂದಿನ ಭಾವಿ ಪ್ರಜೆಗಳಿಗೆ ನೀರಿನ ಕೊರತೆ ಕಂಡುಬರುತ್ತಿದೆ.

## ಚಟುವಟಿಕೆ 6: ನನ್ನ ರಚನೆ

**ಭಾರಿ-ಬಾರಿ, ಧನ-ದನ, ಬಾನು-ಭಾನು, ಪ್ರಧಾನ-ಪ್ರದಾನ, ಫಲ-ಪಲ ಇಂತಹ ಕೆಲವು ಪದಗಳನ್ನು ಬಳಸಿ ಕಥೆ / ಕವಿತೆ / ಸಂಭಾಷಣೆ ಬರೆಯಿರಿ.**

**ಕಥೆ:**

ಈ ಬಾರಿ ಭಾರಿ ದನಗಳ ಜಾತ್ರೆ ನಡೆಯುತ್ತದೆ ಹೋರಿಗಳು ಭಾರಿ ಧನವನ್ನು ರೈತರಿಗೆ ಸಂಪಾದಿಸಿ ಕೊಡುತ್ತವೆ ಈ ಬಾರಿ ನಮ್ಮ ಎತ್ತುಗಳಿಗೆ ಅತ್ಯುತ್ತಮ ಎತ್ತುಗಳು ಎಂದು ಪ್ರಶಸ್ತಿ ಪ್ರಧಾನ ಮಾಡಿದರು ಪ್ರಧಾನವಾಗಿ ಆಕರ್ಷಣೆಯ ಬಿಂದು ಆಗಿದ್ದವು ನಮ್ಮ ಎತ್ತುಗಳು ಚಾಚು ತಪ್ಪದಂತೆ ಪ್ರತಿದಿನವೂ ಎತ್ತುಗಳನ್ನು ಮೇಯಿಸಿದ ಪಲವನ್ನು ಕೊಟ್ಟ ಪರಿಣಾಮ ಒಳ್ಳೆಯ ಫಲ ಇಂದು ಸಿಕ್ಕಿದೆ.

ಒಂದು ಬಾರಿ ಊರಿನಲ್ಲಿ ಭಾರಿ ಕುಸ್ತಿಯನ್ನು ಏರ್ಪಡಿಸಿದ್ದರು ಈ ಕುಸ್ತಿ ದನಗಳ ಜೊತೆಗೆ ಇತ್ತು ಯಾರು ಈ ಕುಸ್ತಿಯನ್ನು ಗೆಲ್ಲುತ್ತಾರೋ ಅಪಾರ ಧನರಾಶಿಯಾಗಿ ಬಹುಮಾನವಿತ್ತು ನಮ್ಮ ತಂದೆ ಈ ಕುಸ್ತಿಯಲ್ಲಿ ಭಾಗವಹಿಸಿ ಗೆದ್ದರೂ ಅವರಿಗೆ ಊರಿನ ಪ್ರಧಾನರು ಉತ್ತ ಕುಸ್ತಿಪಟು ಎಂದು ಪ್ರಶಸ್ತಿ ಪ್ರದಾನ ಮಾಡಿದರು ಬಹಳ ವರ್ಷಗಳು ಅಭ್ಯಾಸ ಮಾಡಿದ ಫಲ ಅವರಿಗೆ ಪ್ರಶಸ್ತಿಗಳು ಬರುತ್ತಿವೆ.

**ಕವಿತೆ:**

ಬಾನು ಭೂಮಿ ಜಗವೆಲ್ಲಕೆ
ಒಂದೇ ದೀಪ ಅದುವೇ ಭಾನು

ಭಾರತ ಬೌಲರ್ ಮೊಹಮ್ಮದ್ ಶಮಿ ಪ್ರಧಾನ
ಅವನಿಗೆ ಸಿಕ್ಕಿತು ಅರ್ಜುನ ಪ್ರಶಸ್ತಿ ಪ್ರದಾನ

ಪ್ರತಿ ಬಾರಿ ದುಡಿ ನೀನು ದನದಂತೆ
ಭಾರಿ ಧನವನ್ನು ಪಡೆ ನೀನು ಋಣದಂತೆ

ಇದುವೇ ಫಲ ನಿನಗೆ
ಮಾಡಿದ್ದುಣ್ಣೋ ಮಹಾರಾಯ

ದುರ್ಗ : ಏನಪ್ಪಾ ಮಾರ ಹಾವೇರಿಗೆ ದನಗಳ ಜಾತ್ರೆಗೆ ಹೋಗಿದ್ದೆಯಾ

ಮಾರಾ: ಹೌದು ಹೋಗಿದ್ದೆ.

ದುರ್ಗ : ಈ ಬಾರಿ ದನಗಳ ಜಾತ್ರೆ ಹೇಗೆ ನಡೆಯಿತು

ಮಾರಾ: ಈ ಬಾರಿ ಭಾರಿ ದನಗಳ ಜಾತ್ರೆ ನಡೆಯಿತು ಭಾರಿ ಹಣದ ವಹಿವಾಟು ನಡೆಯಿತು.

ದುರ್ಗ : ಹೌದೇ ಈ ಬಾರಿಯ ಅತ್ಯುತ್ತಮ ಎತ್ತುಗಳ ಪ್ರಶಸ್ತಿ ಯಾರಿಗೆ ಒಲಿಯಿತು.

ಮಾರಾ: ಈ ಬಾರಿಯ ಅತ್ಯುತ್ತಮ ಎತ್ತುಗಳ ಪ್ರಶಸ್ತಿ ಹುಬ್ಬಳ್ಳಿಯ ಎತ್ತುಗಳಿಗೆ ಒಲಿಯಿತು ಅವರಿಗೆ ಪ್ರಶಸ್ತಿ ಪ್ರದಾನವನ್ನು ಹಾವೇರಿಯ ಪ್ರಧಾನರು ಮಾಡಿದರು.

ದುರ್ಗ : ನಿಮ್ಮ ಎತ್ತುಗಳಿಗೆ ಹೇಗೆ ಸಿಕ್ಕಿತು ಬೆಲೆ

ಮಾರಾ: ನಮ್ಮ ಎತ್ತುಗಳಿಗೂ ಒಳ್ಳೆಯ ಬೆಲೆ ಸಿಕ್ಕಿತು.

ದುರ್ಗ : ನೀನು ಕಷ್ಟಪಟ್ಟು ಪ್ರತಿದಿನವೂ ಮೇಯಿಸಿದ ಫಲ ಇದು.

ಮಾರಾ: ಹೌದು ಆ ದೇವರು ಕೊಟ್ಟ ಪಲ.

## ಚಟುವಟಿಕೆ 7: ಪದ ಸಂಗ್ರಹ

ಧ್ವನಿ ಸಾಮ್ಯ ಪದಗಳನ್ನು ಪಠ್ಯಪುಸ್ತಕದ ಸಹಾಯದಿಂದ ಹುಡುಕಿ ಓದಿ.

## ಚಟುವಟಿಕೆ 8: ಅಕ್ಕರ ಉಚ್ಚಾರ

**ಕೆಳಗಿನ ಪದಗಳನ್ನು ಗಟ್ಟಿಯಾಗಿ ಓದಿ ಬರೆಯಿರಿ.**

| | | | | | |
|---|---|---|---|---|---|
| ಸ: | ಸಂಕರ | ಶಂಕರ | ಕ: | ಕರೆ | ಕರೆ |
| ಶ: | ಶಂಕರ | ಶಂಕರ | ಖ: | ಖರೆ | ಖರೆ |
| ನ: | ಮನ | ಮನೆ | ಒ: | ಒದೆ | ಒದೆ |
| ಣ: | ಮಣ | ಮಣಾ | ಓ: | ಓತ | ಓತ |
| ಆ: | ಆದಿ | ಆದಿ | ಹೊ: | ಹೊದೆ | ಹೊದೆ |
| ಹಾ: | ಹಾದಿ | ಹಾದಿ | ಹೋ: | ಹೋತ | ಹೋತ. |

### ನನ್ನ ಕಲಿಕೆ

| ಕ್ರ. ಸಂ | ಕಲಿಕೆ | ಸರಿ ಗುರುತು |
|---|---|---|
| 1 | ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರ್ತಿಸುತ್ತೇನೆ. | |
| 2 | ಪದಗಳಲ್ಲಿ ಧ್ವನಿ ವ್ಯತ್ಯಾಸದಿಂದಾಗುವ ಅರ್ಥ ವ್ಯತ್ಯಾಸವನ್ನು ಗ್ರಹಿಸುತ್ತೇನೆ. | |
| 3 | ಯಾವುದೇ ಪಠ್ಯದಲ್ಲಿರುವ ಅಕ್ಷರಗಳಲ್ಲಿನ ಧ್ವನಿವ್ಯತ್ಯಾಸವನ್ನು ಅರ್ಥ ಮಾಡಿಕೊಂಡು ಓದುತ್ತೇನೆ. | |
| 4 | ಅಕ್ಷರಗಳ ಧ್ವನಿವ್ಯತ್ಯಾಸವನ್ನು ಅರ್ಥಮಾಡಿಕೊಂಡು ಓದುವುದರ ಜೊತೆಗೆ ಸ್ವಂತ ಬರವಣಿಗೆ ಮಾಡುತ್ತೇನೆ. | |

**ಶಿಕ್ಷಕರ ಹಿಮ್ಮಾಹಿತಿ**

**ದಿನಾಂಕ:** **ಶಿಕ್ಷಕರ ಸಹಿ**